ಆಧಾರದ ಮೇಲೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ತಮಗೆ 7,594 ಕೋಟಿ ರೂಪಾಯಿ ವಿ ಡಿ ಐ ಎಸ್ ಪ್ರೋಗ್ರಾಂನಲ್ಲಿ 500 ಕೋಟಿ ರೂಪಾಯಿ ಹೆಚ್ಚು ಕಡಿಮೆ ಸಿಗಬಹುದು. 230 ಕೋಟಿ ಬೋನಸ್ ಸಿಗುವಾಗ, 50-50 ಲಕ್ಷ ರೂಪಾಯಿ ಆದರೂ ಪ್ರಾರಂಭ ಮಾಡಿ. ಪುಕ್ಸಟ್ಟೆ ಬಂದಿದ್ದು ಹಂಚುವುದಕ್ಕೆ ತಯಾರಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮತ್ತು ಗ್ರಾಮ ಪಂಚಾಯಿತಿ ಇದು ಯಾವುದೂ ಶಾಸಕರಿಗೆ ಸಂಬಂಧವಿಲ್ಲ. ಶಾಸಕರಿಗೆ ಕೇಳುವವರೂ ಇಲ್ಲ, ಇದು ಸ್ಪಷ್ಟ. ಆ ದೃಷ್ಟಿಯಿಂದ ಶಾಸಕರ ಕೈಯಲ್ಲಿ ಯಾವುದೇ ರಸ್ತೆಗೆ ಹೋದರೆ ರಸ್ತೆ ಮಾಡಿಸಬಹುದು, ಒಂದು ಸಣ್ಣ ಕಟ್ಟಡ ಕಟ್ಟಿಸಬಹುದು, ಒಂದು ಕೊಳವೆ ಬಾವಿ ಹಾಕಿಸುವುದು, ಇದಕ್ಕೆ ಎಲ್ಲರೂ ತಯಾರಾಗಿದ್ದಾರೆ, ಇದು ಪಕ್ಷಾತೀತವಾಗಿದೆ. ನಾಳೆ ಚುನಾವಣೆಗೆ ಹೋಗಬೇಕು. ಚುನಾವಣೆಗೆ ಹೋಗುವುದಕ್ಕೆ ಇದು ತಮ್ಮಿಂದ ಆರಂಭವಾಗಬೇಕು.

ಶ್ರೀ ಜೆ. ಹೆಚ್. ಪಟೇಲ್ :- ಈ ವರ್ಷಕ್ಕೆ ಆಗುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಸಿದ್ಧರಾಮಯ್ಯ :- 286 ಕೋಟಿ ಕೇಂದ್ರದಿಂದ ಬರುವ ಹಣ ಕಡಿಮೆಯಾಗುತ್ತಿದೆ.

ಶ್ರೀ ಜೆ. ಹೆಚ್. ಪಟೇಲ್ :- ಚರ್ಚೆ ಮಾಡೋಣ.

(ಈ ಹಂತದಲ್ಲಿ ಶ್ರೀಯುತರುಗಳಾದ ವಾಟಾಳ್ ನಾಗರಾಜ್, ಜಿ.ವಿ. ಶ್ರೀರಾಮರೆಡ್ಡಿ ಮತ್ತು ಕೆ. ಎಸ್. ಪುಟ್ಟಣ್ಣಯ್ಯ ಇವರುಗಳು ಸದನದ ಮುಂದಿನ ಬಾವಿಯಲ್ಲಿ ಬಂದು ಧರಣಿ ಕುಳಿತರು.)

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೆ, ಒಪ್ಪಿಕೊಂಡು ಆಮೇಲೆ ಏನು ಮಾಡುವುದು? ವಾಟಾಳ್ ನಾಗರಾಜ್‌ರವರು ಎತ್ತಿರತಕ್ಕಂತಹ ಪ್ರಶ್ನೆ ಇದು, ಯಡಿಯೂರಪ್ಪನವರು ವಿ ಡಿ ಐ ಎಸ್ ನಲ್ಲಿ 250 ಕೋಟಿ ರೂಪಾಯಿಗಳು ಬರುತ್ತದೆ ಎಂದು ಹೇಳಿದರು, ಅದರ ಬಗ್ಗೆ ನಾನು ಆಗಲೇ ಪ್ರಸ್ತಾಪ ಮಾಡಿದ್ದೇನೆ. ನಮಗೆ ಬರತಕ್ಕಂತಹ ಈ ವರ್ಷ ಎಷ್ಟು ಗ್ಯಾರಂಟ್ಸ್ ಬರುತ್ತಿದೆ ಅಷ್ಟೇ ಗ್ಯಾರಂಟ್ಸ್ ಮುಂದಿನ ವರ್ಷ ಕೊಡುತ್ತೇವೆಂದು ಹೇಳಿದ್ದಾರೆ. ಪ್ಲಾನ್ ಒಂದು ಕಡೆ ಹೆಚ್ಚಾಗಬೇಕು, ಹಳೆಯ ಪ್ಲಾನ್ ಸೈಸ್ ಹೆಚ್ಚು ಮಾಡಿಕೊಂಡು ಕೇಂದ್ರದಿಂದ ಬರತಕ್ಕಂತಹ ಪ್ಲಾನ್ ಅಸಿಸ್ಟೆನ್ಸ್ ಮತ್ತು ಲೋನ್ ಕಡಿಮೆ ಮಾಡಿದರೆ ಪ್ಲಾನ್ ಕಟ್ ಮಾಡಬೇಕಾಗುತ್ತದೆ. ಆ ಕಾರಣದಿಂದ ನಮಗೆ ಬರತಕ್ಕಂತಹ 196 ಕೋಟಿ ಖೋತಾ ಇರುವುದರಿಂದ ಆ 200 ಕೋಟಿ ರೂಪಾಯಿ ಬರುವುದು ನಮಗೆ ಖೋತ ವೈಪ್ ಆಫ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಹೊರತು ಯಾವುದೇ ಹೊಸ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಈ ಹಂತದಲ್ಲಿ ಸಾಧ್ಯವಾಗುವುದಿಲ್ಲ. ನೀವು ಎತ್ತಿರತಕ್ಕಂತಹ ಅಭಿಪ್ರಾಯವನ್ನು ಮುಂದೆ ಚರ್ಚೆ ಮಾಡೋಣ. ಇದರ ಬಗ್ಗೆ ಏನು ತೀರ್ಮಾನ ಮಾಡಬೇಕೆಂದು ಎಲ್ಲಾ ಶಾಸಕರ ಅಭಿಪ್ರಾಯ ತೆಗೆದುಕೊಂಡು ತೀರ್ಮಾನ ಮಾಡೋಣ. ನೀವೆಲ್ಲಾ ಅನುಭವ ಇರುವವರು, ಸರ್ಕಾರ ನಡೆಸಿದವರು ಬಡ್ಜೆಟ್ ಮಾಡಿ, ಪ್ಲಾನ್ ಆಗಿ, ಸೆಕ್ಟೋರಲ್ ಅಲೋಕೇಷನ್ ಆದ ಮೇಲೆ 300 ಕೋಟಿ ರೂಪಾಯಿ ತೆಗೆದು ಇಟ್ಟು ಬಿಡಿ ಎಂದು ಹೇಳಿದರೆ, ಎಲ್ಲಿಂದ ಕೊಡುವುದಕ್ಕೆ ಬರುತ್ತದೆ. Where will it come from?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ವಿ ಡಿ ಐ ಎಸ್ ನಿಂದ ಬರತಕ್ಕಂತಹ ಅಮೌಂಟ್ ಬಗ್ಗೆ ನಾನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಅದು ಹಾಗೆ ಇಟ್ಟಿದ್ದೇನೆಂದು ಹೇಳಿದಿರಿ.